**ಓ.ಎಸ್. ನಂ. 81/2021** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 10.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ.ಕೆ ವಕೀಲರಿಂದಃ</u>

ದಾವಆಸ್ತಿಯ ಸರ್ವೆ ನಂ. 59/ಬಿಪಿ1 ಆಗಿರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ ರಾಜಮ್ಮ ರವರ ಜಮೀನು, ಪಶ್ಚಿಮಕ್ಕೆ ಮಾದಮ್ಮ ರವರ ಜಮೀನು, ದಕ್ಷಿಣಕ್ಕೆ ಗುರುಸ್ವಾಮಿರವರ ಜಮೀನು, ಉತ್ತರಕ್ಕೆ ತಮ್ಮೇಗೌಡರ ಜಮೀನು ಇರುತ್ತದೆ. ಜಿ.ಪಿ.ಎ ಹೋಲ್ಡರ್ ರವಿಬಾಬು ರವರು ಜಿ.ನಾರಾಯಣ ರವರ ಪರವಾಗಿ ಖರೀದಿಸಿರುವ ಆಸ್ತಿಯ ಚಕ್ಕುಬಂದಿ ಬೇರೆ, ದಾವಆಸ್ತಿಯ ಚಕ್ಕುಬಂದಿ ಬೇರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೂ ಈ ಕೇಸಿಗೂ ಏನು ಸಂಬಂಧ ಎಂದರೆ ಸಾಕ್ಷಿದಾರರು ಅವರು ಬಂದು ತೊಂದರೆ ನೀಡಿರುತ್ತಾರೆ ಎನ್ನುವರು. ತೊಂದರೆ ನೀಡಿರುವ ಬಗ್ಗೆ ಪೋಲಿಸರಿಗೆ ದೂರು ನೀಡಿದ್ದು, ಅವರು ಸ್ವೀಕರಿಸಿರುವುದಿಲ್ಲ. 2 ನೇ ಪ್ರತಿವಾದಿಯು 2021 ರಲ್ಲಿ ಅಕ್ರಮ ಕೂಟ ಕಟ್ಟಿಕೊಂಡು ಬಂದಿರುತ್ತಾರೆ, ದಿನಾಂಕ ತಿಂಗಳು ನೆನಪಿರುವುದಿಲ್ಲ, ಆ ಬಗ್ಗೆ ಪೋಲಿಸರಿಗೆ ದೂರು ನೀಡಿರುತ್ತೇನೆ. ದೂರು ನೀಡಿರುವ ಬಗ್ಗೆ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದು ಹೇಳುವ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಮುಂದುವರಿದು ಸುಳ್ಳು ಕರಾರುಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎನ್ನುವರು. ಊರಿನಲ್ಲಿ ಮಾಡಿರುವ ಪಂಚಾಯಿತಿಯಲ್ಲಿ ತಮ್ಮೇಗೌಡ, ಶಿವಣ್ಣ, ರಾಮಲಿಂಗ, ನಿಂಗರಾಜು ಹಾಗೂ ಗ್ರಾಮಸ್ಥರು ಸೇರಿದ್ದರು. ಪ್ರತಿವಾದಿಯರು ಪಂಚಾಯಿತಿಗೆ ಬಂದಿರುವುದಿಲ್ಲ. ನಾವು ದಾವಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದಿರುವುದರಿಂದ 2 ನೇ ಪ್ರತಿವಾದಿಯು ದಾವಆಸ್ತಿಯ ಉಳುಮೆಗೆ ತೊಂದರೆ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೂ ಈ ಕೇಸಿಗೂ ಸಂಬಂಧ ಇರುವುದಿಲ್ಲ, ಎಲ್ಲಾ ವಿಚಾರಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರನ್ನು ಸೇರಿಸಿ ಯಾವುದೇ ಪಂಚಾಯಿತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಪ್ರತಿವಾದಿಯರು ಪಂಚಾಯಿತಿಗೆ ಬಂದಿರುವುದಿಲ್ಲ ಎನ್ನುವರು. ನಾನು ಠಾಣೆಗೆ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಯಾವುದೇ ದೂರು ನೀಡದಿರುವುದರಿಂದ ಯಾವುದೇ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೂ ಕ್ರಯಪತ್ರ ಮಾಡಿಕೊಂಡಾಗ ಜಿಪಿಎ ಹೋಲ್ಡರ್ ಮಾತ್ರ, ಜಿ.ನಾರಾಯಣ ಆಸ್ತಿಯ ಖರೀದಿದಾರರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಸೇರಿ ನಮ್ಮ ಕುಟುಂಬದ ಒಳಿತಿಗಾಗಿ ದಾವಆಸ್ತಿಯನ್ನು ಮಾರಾಟ ಮಾಡಿರುವುದರಿಂದ ದಾವಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ತಂದೆ ತಾಯಿ ಅನಕ್ಷರಸ್ತರಾಗಿದ್ದು ಮೋಸದಿಂದ ಕ್ರಯಪತ್ರ

ಮಾಡಿಸಿಕೊಂಡಿರುತ್ತಾರೆ ಎನ್ನುವರು.  ಮೋಸ ಮಾಡಿರುವ ಬಗ್ಗೆ  ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ದಾವಆಸ್ತಿಯ ಸ್ವಾಧೀನದಲ್ಲಿ ಇರದಿದ್ದರೂ ಸಹ ದಾವಆಸ್ತಿಯನ್ನು ಕಬಳಿಸಲು ದಾವಆಸ್ತಿಯ ಸ್ವಾಧೀನದಲ್ಲಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಜಿ.ನಾರಯಾಣ ರವರನ್ನು ಈ ಕೇಸಿನಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ರವಿಬಾಬು ಮತ್ತು ಜಿ.ನಾರಾಯಣ ರವರನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.